ಇ)ಶಾಸಕರ ನೇತೃತ್ವದ ಕಾರ್ಯಪಡೆ ನಿಷ್ಕ್ರಿಯವಾಗಿರುವುದಿಲ್ಲ. ರಾಜ್ಯಾದ್ಯಂತ ತುರ್ತು ಕುಡಿಯುವ ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದೂರು ದಾಖಲಾದ 24 ತಾಸುಗಳೊಳಗೆ ಸ್ಥಳೀಯ ಅವಶ್ಯಕತೆಯನುಸಾರ ಸೂಕ್ತ ದುರಸ್ತಿ/ಪರಿಹಾರ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನ ಗೊಳಿಸಲು ತಾಲ್ಲೂಕು ಮಟ್ಟದ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದೆ. 40 LPCD ಗಳಿಗಿಂತ ಕಡಿಮೆ ನೀರು ಪೂರೈಕೆಯಿರುವ ಎಲ್ಲಾ ಗ್ರಾಮೀಣ ಜನವಸತಿಗಳಿಗೂ ಸಮರ್ಪಕ ಕುಡಿಯುವ ನೀರು ಒದಗಿಸಲು ಸಮಗ್ರ ಕ್ರಿಯಾ ಯೋಜನೆಯನ್ನು ಸಹ ರೂಪಿಸಲಾಗುತ್ತಿದೆ.

ಶ್ರೀ ನಿಂಗಪ್ಪ. ಹೆಚ್. (ಎಂ.ಎಲ್.ಎ)116(222)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆಯಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಬಂದಿದ್ದಲ್ಲಿ ಯಾವ ಅವದೀಯೊಳಗೆ ಅವಶ್ಯಕ ಸಿಬ್ಬಂದಿಯನ್ನು ತುಂಬಿ ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸಲಾಗುವುದು?

ಶ್ರೀ ಎಸ್.ಬಸವರಾಜ ಹೊರಟ್ಟಿ

1) ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಾದಂತೆಲ್ಲ ಪ್ರತಿ ಸಾಲಿನಲ್ಲೂ ಶಿಕ್ಷಕರ ನೇಮಕಾತಿಯನ್ನು ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ 8387 ಹುದ್ದೆಗಳಿಗೆ ದಿನಾಂಕ;11–01–2007 ರಂದು ಅಧಿಸೂಚನೆಯನ್ನು ನೀಡಿ ಸದರಿ ನೇಮಕಾತಿ ಪ್ರಕ್ರಿಯೆಯನ್ನು ಜೂನ್–2007ರಲ್ಲಿ ಪೂರ್ಣ ಗೊಳಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ ದೈಹಿಕ, ಚಿತ್ರಕಲೆ ಮತ್ತು ಸಂಗೀತ ಶಿಕ್ಷಕರ ಒಟ್ಟು 656 ಹುದ್ದೆಗಳಿಗೆ 25-01-2007 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ದೈಹಿಕ ಶಿಕ್ಷಕರು	-590	ಚಿತ್ರಕಲೆ	-022
ಸಂಗೀತ ಶಿಕ್ಷಕರು	-044	**ಒಟ್ಟು**	**656**

ದಿನಾಂಕ; 30-06-2007 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. 05-07-2007ರಿಂದ ಕೌನ್ಸಿಲಿಂಗ್‌ನ್ನು ನಡೆಸಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

2006-07ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ 5984 ಸಹ ಶಿಕ್ಷಕರ ಗ್ರೇಡ್-2 ವೃಂದದ ಮತ್ತು ದೈಹಿಕ ಶಿಕ್ಷಕರ ಗ್ರೇಡ್-1 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಇದಲ್ಲದೆ ಪ್ರತಿ ಸಾಲಿನಲ್ಲೂ ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ದಕ್ಕೆಯಾಗದಂತೆ ಸ್ಥಳಾಂತರವನ್ನು ಸಹ ಮಾಡಲಾಗುತ್ತಿದೆ. ಪ್ರತಿ ಸಾಲಿನಲ್ಲೂ ಶಿಕ್ಷಕರ ನೇಮಕಾತಿಯನ್ನು ಮತ್ತು ಬಡ್ತಿಯನ್ನು ಸಹ ನೀಡಲಾಗುತ್ತಿದೆ. ಆದ್ದರಿಂದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದಿಲ್ಲ.

ಭೋಧಕೇತರ ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರದ ಆದೆಶ ಸಂಖ್ಯೆ ಇಡಿ 143 ಯೋಯೋಕ 2007, ದಿನಾಂಕ 09-05-2007 ರ ಮೂಲಕ ಸರ್ಕಾರಿ ಪ್ರೌಢಶಾಲೆಗಳಲ್ಲಿ 01 ಸ್ವಿದಸ ಇಲ್ಲದಿರುವ ಶಾಲೆಗಳಿಗೆ ತಲಾ ಒಂದು ಹುದ್ದೆಯಂತೆ 1269 ದ್ವಿ ದ ಸ ಹುದ್ದೆಗಳನ್ನು ಸೃಜಿಸಲು ಮತ್ತು ಅವುಗಳನ್ನು ನಿಯಮಾನುಸಾರ ತುಂಬಲು ಮಂಜೂರು ನೀಡಲಾಗಿದೆ. ಜೊತೆಗೆ ದ್ವಿದಸ ಸಧ್ಯದಲ್ಲಿ ಬಾಹ್ಯ ಸಂಪನ್ಮೂಲ ಆಧಾರದ ಮೇಲೆ ತುಂಬಲು ಪರಿಗಣಿಸುವಂಥೆಯೂ ಸಹ ತಿಳಿಸಲಾಗಿದೆ.

2) 2007–08 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 31–05–07 ರ ವರೆಗೆ ಶಿಕ್ಷಕರ ನಿವೃತ್ತಿಯಿಂದ ತೆರವಾಗಿರುವ ಹುದ್ದೆಯನ್ನು ಸೇರಿಸಿ ಒಟ್ಟು 8939 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಸದ್ಯದಲ್ಲೇ ಅಧಿಸೂಚನೆಯನ್ನು ಹೊರಡಿಸಲಾಗುವುದು.

2007–08ನೇ ಸಾಲಿನಲ್ಲಿ ಸರ್ಕಾರಿ ಪ್ರೌಡಶಾಲೆಗಳಲ್ಲಿ ಖಾಲಿ ಇರುವ ಸುಮಾರು 7865 ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಬಡ್ತಿ ಮುಖಾಂತರ ಭರ್ತಿ ಮಾಡಲು ಸದ್ಯದಲ್ಲೇ ಅಧಿಸೂಚನೆಯನ್ನು ಹೊರಡಿಸ ಲಾಗುವುದು.

1994ನೇ ಸಾಲಿನಿಂದ ಸರ್ಕಾರವು 1462 ದ್ವಿದಸ. ಹುದ್ದೆಗಳನ್ನು ಸರ್ಕಾರಿ ಪ್ರೌಡಶಾಲೆಗಳಿಗೆ ಸರ್ಕಾರ ಮಂಜೂರು ಮಾಡಿದೆ.

ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇ. 67:33 ಅನುಪಾತದಲ್ಲಿ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಬಡ್ತಿ ಮುಖಾಂತರ ಭರ್ತಿ ಮಾಡಲಾಗುತ್ತಿದೆ. ಪ್ರಸಕ್ತ ಖಾಲಿ ಇರುವ 978 ದ್ವಿದ.ಸ.ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಎರಡು ಹಂತಗಳಲ್ಲಿ ದಿನಾಂಕ: 20–06–2007 ಮತ್ತು 06–07–2007 ರಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕಳುಹಿಸಲಾಗಿದೆ.

ಉಳಿದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಹಾಗೂ ಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.